**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃ 140/2015**

ಪ್ರಾಸಾ- 21 ಚಾಸಾ- 19

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಟಿ.ಬಿ.ಭೈರವೇಶ |
| ತಂದೆಯ ಹೆಸರುಃ | ಃ | ಲೇಟ್ ಬಸವಯ್ಯ |
| ವಯಸ್ಸುಃ | ಃ | 58 ವರ್ಷ |
| ಉದ್ಯೋಗಃ | ಃ | ಕೋಟೆಕ್ ಮಹೀಂದ್ರದಲ್ಲಿ ನೌಕರಿ |
| ವಾಸಃ | ಃ | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 18-07-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2012 ರಿಂದ 2015 ರವರೆಗೆ ಬಜಾಜ್ ಆಲಿಯಾನ್ಜ್ ಮೈಸೂರಿನಲ್ಲಿ ಬ್ರ್ಯಾಂಚ್ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ.

2. ಲೋಕಾಯುಕ್ತ ಕಛೇರಿಯಿಂದ ನಮ್ಮ ಇನ್ಸುರೆನ್ಸ್ ಕಂಪೆನಿಗೆ ಮೇಲೆ ಹೇಳಿದ ಅವಧಿ ಅಂದರೆ 18.07.14 ರಂದು ಒಂದು ಪತ್ರ ಬಂದಿದ್ದು, ಸಿಆರ್.ಮಂಜುನಾಥ್ ರವರ ಪಾಲಿಸಿಗೆ ಸಂಬಂಧಪಟ್ಟಂತೆ ಒಂದು ಮಾಹಿತಿಯನ್ನು ಕೇಳಿರುತ್ತಾರೆ. ಸದರಿ ಮಾಹಿತಿಯು ಯೂನಿಟ್ ಲಿಂಕ್ಡ್ ಪಾಲಿಸಿಗೆ ಸಂಬಂಧಿಸಿತ್ತು. ಆ ಪಾಲಿಸಿಗೆ ಲೋನ್ ಮತ್ತು ಬೋನಸ್ ಸಿಗುವುದಿಲ್ಲ. ಅದರ ಮೆಚುರಿಟಿ ಅವಧಿಯು 07.08.2028 ಆಗಿರುತ್ತದೆ. ಈ ಬಗ್ಗೆ ನಾನು ಮಾಹಿತಿಯನ್ನು ನನ್ನ ಪತ್ರದ ಮೂಲಕ ನೀಡಿದ್ದೇನೆ. ಸದರಿ ಪತ್ರವನ್ನು (2 ಪುಟಗಳು) ನಿಪಿ-110 ಎಂದು ನನ್ನ ಸಹಿಯನ್ನು ನಿಪಿ-110(ಎ) ಎಂದು ಗುರುತಿಸಲಾಯಿತು. ಸದರಿ ಪಾಲಿಸಿಯ ಪ್ರಕಾರ ಪ್ರತಿವರ್ಷ 12,500 ರಂತೆ 3 ವರ್ಷಗಳ ಕಾಲ ಅಂದರೆ ಒಟ್ಟು 37,500 ರೂಪಾಯಿಯನ್ನು

ಪಾವತಿಸಿರುತ್ತಾರೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ಪರವಾಗಿ ಶ್ರೀ ಎನ್.ಆರ್.ಆರ್. ವಕೀಲರಿಂದಃ-**

ಲೋಕಾಯುಕ್ತ ಕಛೇರಿಯಿಂದ ಸಿ.ಆರ್.ಮಂಜುನಾಥ್ ರವರಿಗೆ ಸೇರಿದ ಪಾಲಿಸಿಯ ವಿವರವನ್ನು ಕೇಳಿ ಪತ್ರ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೊಟ್ಟ ಪತ್ರದಲ್ಲಿ ಪಾಲಿಸಿಯ ಮೊತ್ತ ಎಷ್ಟಿತ್ತು ಅದರ ಅವಧಿ ಏನು ಎಂದು ಬರೆದಿರಲಿಲ್ಲ ಎಂದರೆ ನಿಜ. ಲೋಕಾಯುಕ್ತ ಪೋಲೀಸರ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ನನಗೆ ಏನು ಪತ್ರ ಬಂದಿದೆ ಅದರ ವಿವರ ನೀಡಿದ್ದೇನೆ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**